## ಟಿ ಬಿ ಪರಿಹಾರೋಪಾಯಗಳ ಸರಿಯಾದ ಮಾಹಿತಿ



ಟಿಬಿ ಹರಡುವುದನ್ನು ತಡೆಗಟ್ಟಲು ಪೀಡಿತರು
ಯಾವಾಗಲೂ ಕರವಸ್ತ್ರದಿಂದ ಮುಖವನ್ನು ಮುಚ್ಚಿಯೇ
ಕೆಮ್ಮುವುದನ್ನು ಸೀನುವುದನ್ನು ಮಾಡಬೇಕು



ಕಂಡ ಕಂಡಲ್ಲಿ ಉಗುಳಬಾರದು



ರೋಗಲಕ್ಷಣ ಕಂಡುಬಂದಲ್ಲಿ ಡಾಕ್ಟರ್‌ರ
ಸಲಹೆ ಪಡೆದು ಚಿಕಿತ್ಸೆ ನಡೆಸಿ



ಟಿಬಿ ಗೆ ಚಿಕಿತ್ಸೆ ನಡೆಸುವಾಗ ರೋಗವನ್ನು ಎದುರಿಸುವ ಶಕ್ತಿ
ಪಡೆಯುವ ಸಲುವಾಗಿ ಆರೋಗ್ಯಕರ ಆಹಾರವನ್ನೇ ಸೇವಿಸಿ



ಟಿಬಿಗಾಗಿ ಆರೋಗ್ಯಕರ ಆಹಾರ : ಬೇಳೆ, ಧಾನ್ಯ,
ಹಾಲು ಮತ್ತು ಹಾಲುತ್ಪನ್ನಗಳು. ಎಣ್ಣೆ ಹಾಗೂ ತುಪ್ಪ, ಚಪಾತಿ, ಅನ್ನ,
ನೆಲಗಡಲೆ, ಪೇರಳೆ ಮತ್ತು ಬಾಳೆಹಣ್ಣು ಇತ್ಯಾದಿ.

## ನಿಕ್ಷಯ ಪೋಷಣಾ ಯೋಜನೆ

ನಿಕ್ಷಯ ಪೋಷಣಾ ಯೋಜನೆಯಲ್ಲಿ ಭಾರತ ಸರಕಾರ ಟಿಬಿ ಗ್ರಸ್ತರ ಸ್ವಸ್ಥ ಆಹಾರಕ್ಕಾಗಿ ತಿಂಗಳಿಗೆ **₹500** ಧನ ಸಹಾಯ ಮಾಡುತ್ತಲಿದೆ. ಈ ಸಹಾಯ ಚಿಕಿತ್ಸೆ ಪೂರ್ಣರೂಪ ಪಡೆಯುವ ತನಕ ಜಾರಿಯಲ್ಲಿರುತ್ತದೆ.

ಈ ಯೋಜನೆಯ ಲಾಭ ಪಡೆಯಲು ಪೀಡಿತರು ಭಾರತ ಸರಕಾರದ ನಿಕ್ಷಯ ಯೋಜನೆಯ ಸದಸ್ಯರಾಗಬೇಕಾಗುತ್ತದೆ. ನಿಕ್ಷಯದ ಸದಸ್ಯರಾಗುವ ಇಲ್ಲಿ ಕೇಳಲಾದ ಸಂಪೂರ್ಣ ಮಾಹಿತಿಯನ್ನು ನಿಮ್ಮ ಡಾಕ್ಟರ್ / ಜೀತ್ ಟೀಮಿಗೆ ಒದಗಿಸಬೇಕಾಗಿ ವಿನಂತಿ.


ಈ ಯೋಜನೆಯ ಲಾಭ ಪಡೆಯಲು ಇಲ್ಲಿ ತಿಳಿಸಲಾದ ಮಾಹಿತಿಯನ್ನು ನೀಡಬೇಕಾಗಿ ವಿನಂತಿ:

- **ಪೀಡಿತರ ಹೆಸರು ಹಾಗೂ ಫೋನ್ ನಂಬರ್**
- **ಪೀಡಿತರ ಬ್ಯಾಂಕ್ ಖಾತೆ ನಂಬರ್**
- **ಬ್ಯಾಂಕ್‌ನ ಹೆಸರು,ಬ್ಯಾಂಕ್ ಇರುವ ವಿಳಾಸ**
- **ಬ್ಯಾಂಕ್‌ನ IFSC ಕೋಡ್**

ಪರಿಶೀಲನೆಗಾಗಿ ನಿಮ್ಮ ಬ್ಯಾಂಕ್ ಪಾಸ್‌ಬುಕ್ ಅಗತ್ಯವಾಗಿ ತೋರಿಸಿ

ಬ್ಯಾಂಕ್ ಪಾಸ್‌ಬುಕ್ ಮತ್ತು ಆಧಾರ ಕಾರ್ಡ್ (ಅಥವಾ ಇನ್ಯಾವುದೇ IDಪ್ರೂಫ್) ನ ಪ್ರತಿ ಒದಗಿಸಿ


ಜನಹಿತ ದೃಷ್ಟಿಯಿಂದ ಜಾರಿಗೊಳಿಸಲಾಗಿದೆ | Joint Effort for Elimination of Tuberculosis




ಜನಹಿತ ದೃಷ್ಟಿಯಿಂದ ಜಾರಿಗೊಳಿಸಲಾಗಿದೆ | Joint Effort for Elimination of Tuberculosis

## ಏನಿದು ಟಿ ಬಿ ಕಾಯಿಲೆ ?

ಟಿಬಿ ಬ್ಯಾಕ್ಟೀರಿಯಾದಿಂದ ಹರಡುವ ಒಂದು ಸಾಂಕ್ರಾಮಿಕ ರೋಗ. ಅದು ಯಾರಿಗೂ ತಗಲಬಹುದು. ಟಿಬಿಯ ರೋಗಾಣು ಪೀಡಿತರ ಕೆಮ್ಮು ಮತ್ತು ಸೀನುಗಳಿಂದ ಗಾಳಿಯಲ್ಲಿ ಸೇರಿಕೊಳ್ಳುವುದು. ಮತ್ತು ಅದು ಇತರರಿಗೆ ಸೋಂಕು ಉಂಟುಮಾಡಬಹುದು. ಆದರೆ ಭಯಪಡುವ ಅವಶ್ಯಕತೆ ಇಲ್ಲ. ಟಿಬಿಯಿಂದ ರಕ್ಷಿಸಿಕೊಳ್ಳಬಹುದು. ಟಿಬಿಯನ್ನು ದೂರವಿಡಬಹುದು. ಟಿಬಿಯ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಡಾಕ್ಟರ್‌ರ ಸಲಹೆ ಪಡೆದುಕೊಳ್ಳಬೇಕು.



## ಟಿಬಿ ಯ ಪ್ರಮುಖ ಲಕ್ಷಣಗಳು




2 ವಾರಕ್ಕಿಂತಲೂ ಜಾಸ್ತಿ ಕೆಮ್ಮು



ಕೆಮ್ಮುವಾಗ ಬಾಯಿಯಲ್ಲಿ ರಕ್ತ ಬರುವುದು



ಜ್ವರ ಬರುವುದು



ತೂಕ ಇಳಿಯುವುದು




ಕೆಮ್ಮಿನೊಂದಿಗೆ ಕಫ ಬರುವುದು



ಹಸಿವಾಗದಿರುವುದು

## ಟಿಬಿ ಪರೀಕ್ಷೆಯನ್ನು ಕಡೆಗಣಿಸಬೇಡಿ





ಟಿಬಿ ಪರೀಕ್ಷೆಗಾಗಿ ಡಾಕ್ಟರ್‌ರನ್ನು ಸಂಪರ್ಕಿಸಿ. ಕಫ ಪರೀಕ್ಷೆಯ ಮೂಲಕ ಟಿಬಿಯ ಪತ್ತೆ ಹಚ್ಚಲು ಸಾಧ್ಯವಿದೆ.
ನೆನಪಿರಲಿ, ಸರಿಯಾದ ಪರೀಕ್ಷೆಗಾಗಿ ಸರಿಯಾಗಿ ಕೆಮ್ಮಿ ಉಗುಳನ್ನಲ್ಲ; ನಿಜವಾದ ಕಫವನ್ನು ಪರೀಕ್ಷೆಗೆ ಒಳಪಡಿಸಿ.

## ಟಿಬಿಗೆ ಚಿಕಿತ್ಸೆ



ಟಿಬಿಗೆ ಚಿಕಿತ್ಸೆ ಇದೆ. ಔಷಧ 6 ರಿಂದ 8 ತಿಂಗಳು ಅಥವಾ ಅಧಿಕ ಸಮಯದ ವರೆಗೆ ನಿರಂತರ ನಡೆಯುತ್ತದೆ.



ಔಷಧ ಸೇವಿಸಲು ಎಷ್ಟು ಸಮಯ ನಿಗದಿಪಡಿಸುವರೋ ಅಷ್ಟು ಸಮಯ ತಪ್ಪದೆ ಪೂರ್ತಿಗೊಳಿಸಬೇಕು. ಡಾಕ್ಟರ್‌ರ ಸಲಹೆಯ ಮೇರೆಗೇ ಔಷಧ ನಿಲ್ಲಿಸತಕ್ಕದ್ದು.



ಚಿಕಿತ್ಸೆ ನಡುಮಧ್ಯೆ ನಿಲ್ಲಿಸುವುದರಿಂದ ಅಥವಾ ಔಷಧ ನಿಯಮಿತವಾಗಿ ತೆಗೆದುಕೊಳ್ಳದಿದ್ದರೆ ಹತೋಟಿಗೆ ಸಿಗದೆ ಪ್ರಾಣಕ್ಕೂ ಹಾನಿಯಾಗಬಹುದು.

## ಚಿಕಿತ್ಸೆಯ ಸಮಯದಲ್ಲಿ ಗಮನಕೊಡತಕ್ಕದ್ದು



ಟಿಬಿಗಾಗಿ ಔಷಧೋಪಚಾರ ನಡೆಯುತ್ತಿರುವಾಗ ತಂಬಾಕು, ಬೀಡಿ, ಸಿಗರೇಟು,ಹುಕ್ಕಾ, ಶರಾಬು ಮುಂತಾದ ಯಾವುದೇ ನಶೆಯಿಂದ ದೂರವಿರಬೇಕು.



ಟಿಬಿ ಔಷಧ ಸೇವಿಸುವಾಗ ಸ್ವಲ್ಪ ಪ್ರಭಾವಕ್ಕೊಳಪಡುವ ಸಾಧ್ಯತೆ ಇರುತ್ತದೆ. ಉದಾ: ಉಬ್ಬಳಿಕೆ ಬಂದಂತಾಗುವುದು. ವಾಂತಿಯಾಗುವುದು, ಮೂತ್ರ-ಜೊಲ್ಲು-ಕಣ್ಣೀರಿನ ಬಣ್ಣ ಕಿತ್ತಳೆ ಅಥವಾ ಕೆಂಪಗಾಗುವುದು. ಹೊಟ್ಟೆ ನೋವು. ಇದಕ್ಕೆಲ್ಲ ಭಯ ಪಡಬೇಕಾಗಿಲ್ಲ. ತೊಂದರೆ ಕಾಣಿಸಿದಾಗಲೆಲ್ಲ ಡಾಕ್ಟರ್‌ರ ಸಲಹೆ ಪಡೆಯುತ್ತಾಇರಬೇಕು. ಅದರ ಬದಲು ನೀವೇ ಔಷಧವನ್ನು ನಿಲ್ಲಿಸಲೇಬಾರದು.